ಶ್ರೀ ತಿಪ್ಪೇಸ್ವಾಮಿ(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ)ಜಿಲ್ಲಾ ಪಂಚಾಯತ್ ಮಂಗಳೂರು ಇವರಿಗೆ ಸಂಬಂಧಿಸಿದಂತೆ 1995-96ರಲ್ಲಿ 1.9 ಲಕ್ಷ ರೂ. ಗಳಅನುದಾನ1997-98ರಲ್ಲಿ 0.22ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ.

ಆ)ಸಣ್ಣ ನೀರಾವರಿ ವ್ಯಾಪ್ತಿಗೆ ಯಾವುದೇ ಕೆರೆಗಳ ಬರುವುದಿಲ್ಲ. ಆದ್ದರಿಂದ ಯಾವುದೇ ವೆಚ್ಚವನ್ನು ಮಾಡಿರುವುದಿಲ್ಲ. ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ವಿಭಾಗ ಮಂಗಳೂರು ಇವರಿಗೆ ಸಂಬಂಧಿಸಿದಂತೆ 1995-96 ಹಾಗೂ 1997 -98 ನೇ ಸಾಲಿನಲ್ಲಿ 4 ಕೆರೆಗಳಲ್ಲಿ 2. 12ಲಕ್ಷ ರೂ.ಗಳ ವೆಚ್ಚದಲ್ಲಿ ಹೂಳುತೆಗೆಯಲಾಗಿದೆ.

ಇ)ಸಣ್ಣ ನೀರಾವರಿ ದಕ್ಷಿಣ ಇವರಿಗೆ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಜಿಲ್ಲಾ ಪಂಚಾಯತ್ ಇಂಜಿಯರಿಂಗ್ ವಿಭಾಗ, ಮಂಗಳೂರು ಇವರ ವತಿಯಿಂದ ಕೆರೆಗಳ ಹೂಳೆತ್ತುವ ಯಾವುದೇ ಪ್ರಸ್ತಾವನೆ ಇಲ್ಲದಿರುವ ಕಾರಣ ಹಣ ಒದಗಿಸಿರುವುದಿಲ್ಲ.

ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಹಾಗೂ ಕೋಟಫಿರ್ಕಾದ ಗ್ರಾಮಗಳಲ್ಲಿ ವಿದ್ಯುತ್ ವ್ಯವಸ್ಥೆ

337 (759) ಶ್ರೀ ಡಿ.ವಿ.ಸದಾನಂದ ಗೌಡ : ಮಾನ್ಯ ಸಾರಿಗೆ ಸಚಿವರು ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಹಾಗೂ ಕೋಟಫಿರ್ಕಾದ ಗ್ರಾಮಗಳಲ್ಲಿನ ವಿದ್ಯುತ್ ವ್ಯವಸ್ಥೆಯನ್ನು ಸುಧಾರಿಸಲು ಉಪ್ಪಿನಂಗಡಿ ಅಥವಾ ನೆಲ್ಲಾಡಿಯಲ್ಲಿ ಸಬ್ ಸ್ಟೇಷನ್ ಸ್ಥಾಪಿಸುವ ಪ್ರಸ್ತಾವನೆ ಈಗ ಯಾವ ಹಂತದಲ್ಲಿದೆ;

ಆ)ಇದನ್ನು ಕಾರ್ಯರೂಪಕ್ಕೆ ತರಲು ಸರ್ಕಾರವು ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ)ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಕೋಟಫಿರ್ಕಾದ ಗ್ರಾಮಗಳಲ್ಲಿನ ವಿದ್ಯುತ್ ವ್ಯವಸ್ಥೆ ಸುಧಾರಿಸಲು ಉಪ್ಪಿನಂಗಡಿ ಸಮೀಪ ಒಂದು 110: 11 ಕೆ.ವಿ. ಸಬ್‌ಸ್ಟೇಷನ್ ಸ್ಥಾಪಿಸುವ ಪ್ರಸ್ತಾವನೆ ಪರಿಶೀಲನೆಯ ಹಂತದಲ್ಲಿದೆ.

ಆ)ಪರಿಶೀಲನೆಯ ನಂತರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿ ಅಂತರ್ಜಲ ಮಟ್ಟ ಅಭಿವೃದ್ಧಿಗಾಗಿ ಬಿಳಿ ಪ್ರದೇಶವೆಂದು ಘೋಷಿಸುವ ಬಗ್ಗೆ

338 (719) ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ರಾಜ್ಯದಲ್ಲಿ ಕಪ್ಪು ಮತ್ತು ಬೂದು ಪ್ರದೇಶಗಳ (ತಾಲ್ಲೂಕುಗಳ) ಅಂತ ರ್ಜಲ ಅಭಿವೃದ್ಧಿಗಾಗಿ ಸರ್ಕಾರ ತೆಗೆದು ಕೊಂಡ ಕ್ರಮಗಳೇನು;

ಆ) ಅಂತರ್ಜಲ ಮಟ್ಟ ಅಭಿವೃದ್ಧಿಯಾಗಿ ಬಿಳಿ ಪ್ರದೇಶವೆಂದು ಘೋಷಿಸಲು ಕೈಗೊಳ್ಳಬೇಕಾದ ಕ್ರಮಗಳು ಯಾವುವು ಮತ್ತು ಅದಕ್ಕೆ ಬೇಕಾಗುವ ಅವಧಿ ಎಷ್ಟು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಕಪ್ಪು ಮತ್ತು ಬೂದು ಪ್ರದೇಶಗಳಲ್ಲಿ ಅಂತರ್ಜಲವನ್ನು ಅಭಿವೃದ್ಧಿಪಡಿಸಲು ಮರುಪೂರೈಕೆ ರಚನೆಗಳಾದ, ನಾಲಾಬಂಡ್, ಗಲ್ಲಿ ಪ್ಲಗ್ಗಿಂಗ್, ಕೃತಕ ಡೈಕ್, ಗೋಕಟ್ಟೆಗಳಲ್ಲಿ ಹೂಳು ತೆಗೆಯುವುದು, ಇಂಗು ಬಾವಿಗಳ ನಿರ್ಮಾಣ ಇತ್ಯಾದಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಆ) ಅಂತರ್ಜಲ ಮಟ್ಟ ವೃದ್ಧಿಯಾಗಿ ಬಿಳಿ ಪ್ರದೇಶಗಳೆಂದು ಘೋಷಿಸಲು ಕಿರು ಜಲಾನಯನ ಪ್ರದೇಶವಾರು ಅಂತರ್ಜಲ ಮರುಪೂರೈಕೆ ರಚನೆಗಳನ್ನು ನಿರ್ಮಾಣ ಮಾಡಬೇಕು. ಎಲ್ಲಾ ರಚನೆಗಳ ನಿರ್ಮಾಣಕ್ಕೆ 2-3 ವರ್ಷಗಳಷ್ಟು ಅವಧಿ ಬೇಕಾಗುತ್ತದೆ.

ರಾಜ್ಯ ಸಚಿವ ಸಂಪುಟದ ಸಚಿವರು ಕೈಗೊಂಡ ವಿದೇಶ ಪ್ರವಾಸಗಳು

339 (581) Shri. Vatal Nagaraj (Chamarjanagar) : Will the Chief Minster be pleased to state?

1. How many Ministers have under taken Foreign Tours from 1995 to 1998?

2. Who are these Minister sand which are the Countries they visited?

3. What is the Expenditure incurred by them? and benefits derived by the State from these tours?

SRI. J.H. PATEL (CHIEF MINISTER) :

1. 28 Ministers.

2. (2) & (3): Information is furnished in the Annexure.